# ಕರ್ನಾಟಕ ಸೆಂಟ್ರಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಧಾರವಾಡ

ಕ್ರ:ಆಡಳಿತ/ಎವಇ/ 811 /2026–27. ಧಾರವಾಡ. ದಿ : 02–09–2026.

# ವಾರ್ಷಿಕ ಮಹಾಸಭೆಯ ನೋಟಿಸು

ಬ್ಯಾಂಕಿನ ಸನ್ 2025–26ನೇ ಸಾಲಿನ 110ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ : 20–09–2026 ರಂದು ಬೆಳಿಗ್ಗೆ 11–30 ಗಂಟೆಗೆ **ಸನ್ನಿಧಿ ಕಲಾಕ್ಷೇತ್ರ, ಜೆ.ಎಸ್.ಎಸ್. ಕಾಲೇಜ ಆವರಣ ವಿದ್ಯಾಗಿರಿ,** ಧಾರವಾಡದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಶಿವಕುಮಾರಗೌಡ ಎಸ್ ಪಾಟೀಲ ಇವರ ಅಧ್ಯಕ್ಷತೆಯಲ್ಲಿ ಈ ಕೆಳಗಿನ ವಿಷಯಗಳನ್ನು ಚರ್ಚಿಸಲು ಕರೆಯಲಾಗಿದೆ. ಬ್ಯಾಂಕಿನ ಯಾವತ್ತೂ ಸದಸ್ಯ ಸಹಕಾರ ಸಂಘಗಳ ಪ್ರತಿನಿಧಿಗಳು ತಪ್ಪದೇ ಸಭೆಗೆ ಹಾಜರಾಗಲು ಕೋರಲಾಗಿದೆ.

## ಚರ್ಚಿಸತಕ್ಕ ವಿಷಯಗಳು

| | | ಪುಟ ಸಂಖ್ಯೆ |
|---|---|---|
| ವಿಷಯ–1 : | ವಾರ್ಷಿಕ ಮಹಾ ಸಭೆಯ ನೋಟೀಸನ್ನು ಓದಿ ದಾಖಲಿಸುವ ಬಗ್ಗೆ. | 1–2 |
| ವಿಷಯ–2 : | ದಿ:20–09–2025 ರಂದು ಜರುಗಿದ ವಾರ್ಷಿಕ ಮಹಾಸಭೆಯ ನಡುವಳಿಕೆಗಳನ್ನು ಓದಿ ದಾಖಲಿಸುವ ಬಗ್ಗೆ. | 22–58 |
| ವಿಷಯ–3 : | ಸನ್ 2025–26ನೇ ಸಾಲಿನ ವಾರ್ಷಿಕ ವರದಿಯನ್ನು ಪರಿಗಣಿಸುವ ಬಗ್ಗೆ. | 3–6 |
| ವಿಷಯ–4 : | ಸನ್ 2025–26 ನೇ ಸಾಲಿನ ಲೆಕ್ಕಪರಿಶೋಧನಾ ವರದಿಗೆ ಸಲ್ಲಿಸಿದ ಅನುಪಾಲನಾ ವರದಿಗೆ ಮಂಜೂರಿ ನೀಡುವ ಬಗ್ಗೆ | 7 |
| ವಿಷಯ–5 : | ವಿಚಾರಣಾ ವರದಿಗಳಿದ್ದಲ್ಲಿ ಪರಿಶೀಲಿಸುವ ಬಗ್ಗೆ. | 7 |
| ವಿಷಯ–6 : | ಸನ್ 2025–26ನೇ ಸಾಲಿನ ಲೆಕ್ಕ ಪರಿಶೋಧಿತ ಜಮಾ–ಖರ್ಚು, ಲಾಭ–ಹಾನಿ, ಅಢಾವೆ ಹಾಗೂ ಇತರೆ ಪತ್ರಿಕೆಗಳನ್ನು ಪರಿಶೀಲಿಸುವ ಬಗ್ಗೆ. | 59–101 |
| ವಿಷಯ–7 : | ನಿವ್ವಳ ಲಾಭಾಂಶ ವಿಲೇವಾರಿ ಬಗ್ಗೆ. | 7 |
| ವಿಷಯ–8 : | ವ್ಯವಹಾರ ನಿರ್ವಹಣಾ ಕೊರತೆಗಳೇನಾದರೂ ಇದ್ದಲ್ಲಿ ಅವಲೋಕಿಸುವುದು ಮತ್ತು ಅಂತಹ ಕೊರತೆಗಳನ್ನು ಕಡಿಮೆಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳುವ ಬಗ್ಗೆ. | 7–8 |
| ವಿಷಯ–9 : | ಸನ್ 2026–27ನೇ ಸಾಲಿನಲ್ಲಿ ಬ್ಯಾಂಕಿನ ಕಾರ್ಯಚಟುವಟಿಕೆಗಳಿಗೆ ಅನುಮೋದನೆ ನೀಡುವ ಬಗ್ಗೆ. | 8 |
| ವಿಷಯ–10(ಅ) : | ಸನ್ 2025–26ನೇ ಸಾಲಿನ ಸ್ವೀಕೃತ ಅಂದಾಜು ವೆಚ್ಚಕ್ಕಿಂತ ವಿವಿಧ ಕಲಂಗಳ ಮೇಲೆ ಹೆಚ್ಚಿಗೆ ಖರ್ಚು ಆಗಿದ್ದನ್ನು ಮಂಜೂರಿ ನೀಡುವ ಬಗ್ಗೆ. | 9 |
| ವಿಷಯ–10(ಬ) : | ಸನ್ 2026–27ನೇ ಸಾಲಿನ ಅಂದಾಜು ಆಯವ್ಯಯ ಪತ್ರಿಕೆಗೆ ಮಂಜೂರಾತಿ ನೀಡುವ ಬಗ್ಗೆ. | 9–10 |
| ವಿಷಯ–11 : | ನಿರ್ದಿಷ್ಟ ಮೀಸಲುಗಳು ಹಾಗೂ ಇತರೇ ನಿಧಿಗಳನ್ನು ಸೃಷ್ಟಿಸುವ ಬಗ್ಗೆ. | 10–11 |
| ವಿಷಯ 12 : | ಬ್ಯಾಂಕು ಇತರೆ ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆದಿರುವದನ್ನು ಅನುಮೋದಿಸುವ ಬಗ್ಗೆ. | 11 |
| ವಿಷಯ–13 : | ಯಾವುದೇ ಅಧೀನ ಸಂಸ್ಥೆಗಳ ವಾರ್ಷಿಕ ವರದಿ ಮತ್ತು ಲೆಕ್ಕಪತ್ರಗಳಿದ್ದಲ್ಲಿ ಅವುಗಳನ್ನು ಅವಲೋಕಿಸುವದು. | 11 |
| ವಿಷಯ–14 : | ಆಡಳಿತ ಮಂಡಳಿ ಸದಸ್ಯರ ಅಥವಾ ಮುಖ್ಯ ಕಾರ್ಯನಿರ್ವಾಹಕರ ಸಂಬಂಧಿಕರಾಗಿದ್ದು ಬ್ಯಾಂಕಿನ ನೌಕರರಾಗಿ ನೇಮಕಾತಿಗೊಂಡಲ್ಲಿ ಅಂಥಹ ನೌಕರರ ಪಟ್ಟಿಯನ್ನು ಅವಲೋಕಿಸುವ ಬಗ್ಗೆ. | 11 |
| ವಿಷಯ–15 : | ಬ್ಯಾಂಕಿನ ಉಪ ನಿಯಮಗಳ ತಿದ್ದುಪಡಿ ಬಗ್ಗೆ. | 11–13 |
| ವಿಷಯ–16 : | ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು, ಪದಾಧಿಕಾರಿಗಳು ಮತ್ತು ನೌಕರರ ವರ್ತನೆ (ಕೋಡ ಆಫ್ ಕಂಡಕ್ಟ) ಗಳನ್ನು ರೂಪಿಸುವ ಬಗ್ಗೆ. | 13 |
| ವಿಷಯ–17 : | ಬ್ಯಾಂಕಿನ ಸದಸ್ಯ ಸಂಘಗಳಿಂದ ಹಾಗೂ ನಿರ್ದೇಶಕರಿಂದ ಬ್ಯಾಂಕಿನ ಸೇವೆಗಳ ಬಳಕೆಯ ಬಗ್ಗೆ ವಿಮರ್ಶೆ. | 13 |



Scanned with OKEN Scanner

| | | |
|---|---|---|
| ವಿಷಯ–18 : | ನಿರ್ದೇಶಕರಿಗೆ ಮತ್ತು ಅವರ ಸಂಬಂಧಿಕರಿಗೆ ನೀಡಲಾದ ಸಾಲಗಳು ಸುಸ್ತಿ ಬಾಕಿ ಯಾವುದಾದರೂ ಇದ್ದರೆ ಅವುಗಳ ಹಾಗೂ ಅಂತಹ ಸುಸ್ತಿ ಬಾಕಿಗಳ ವಸೂಲಿಗಾಗಿ ಕೈಕೊಂಡ ಕ್ರಮದ ಪರಿಶೀಲನೆ. | 14 |
| ವಿಷಯ–19 : | ಪದಾಧಿಕಾರಿಗಳು ಸೇರಿದಂತೆ ನಿರ್ದೇಶಕರುಗಳಿಗೆ, ಅವರ ಸ್ಥಾನಗಳ ಕರ್ತವ್ಯಗಳಿಗೆ ಅಥವಾ ಸಂಬಂಧಿತ ಸಭೆಗಳಿಗೆ ಹಾಜರಾದುದಕ್ಕೆ ಸಂಬಂಧಪಟ್ಟಂತೆ ಅವರುಗಳಿಗೆ ನೀಡುವ ಸಂಭಾವನೆ, ಪ್ರಯಾಣ ಭತ್ತೆ, ದಿನಭತ್ತೆ ಮತ್ತು ಇತರೇ ಭತ್ತೆಗಳನ್ನು ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಮತ್ತು ಲಾಭದಾಯಕತೆಗಳನ್ನು ಗಮನ ದಲ್ಲಿಟ್ಟು ನಿಗದಿ ಮಾಡುವುದು ಹಾಗೂ ಇವುಗಳನ್ನು ಸಂದಾಯ ಮಾಡಿದ ಬಗ್ಗೆ ವಿಮರ್ಶೆ ನಡೆಸುವದು. | 14 |
| ವಿಷಯ–20 : | ಹೊಸ ಸದಸ್ಯತ್ವ ನೀಡಿದ್ದರ ಬಗ್ಗೆ. | 14–15 |
| ವಿಷಯ–21 : | ಸದಸ್ಯತ್ವದಿಂದ ಕಡಿಮೆ ಮಾಡಿದ್ದರ ಬಗ್ಗೆ. | 15 |
| ವಿಷಯ–22 : | ಉಪ ನಿಯಮಗಳನುಸಾರವಾಗಿ ಮಂಡಿಸಬಹುದಾದ ಇತರೆ ವಿಷಯಗಳಿದ್ದ ಬಗ್ಗೆ. | 15 |
| ವಿಷಯ–23 : | ಬ್ಯಾಂಕಿನ 2026–27ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ. | 15 |
| ವಿಷಯ–24 : | ಸ್ವಯಂ ಪ್ರೇರಿತ ಒಟ್ಟುಗೂಡುವಿಕೆ, ವಿಭಜನೆ, ವಿಲೀನ, ಆಸ್ತಿ ಮತ್ತು ಜವಾಬ್ದಾರಿಗಳ ವರ್ಗಾವಣೆ ಬಗ್ಗೆ. | 16 |
| ವಿಷಯ–25 : | ಆಡಳಿತ ಮಂಡಳಿ ತೀರ್ಮಾನಗಳ ವಿರುದ್ದ ಸಲ್ಲಿಸಲ್ಪಟ್ಟ ಮೇಲ್ಮನವಿಗಳ ವಿಚಾರಣೆ ಮತ್ತು ವಿಲೇವಾರಿ ಮಾಡುವ ಬಗ್ಗೆ. | 16 |
| ವಿಷಯ–26 : | ವಸೂಲಾತಿ ಸಾಧ್ಯವಿಲ್ಲವೆಂದು ಪರಿಗಣಿಸಲಾದ ಕಟಬಾಕಿ (ಹೋಕು) ಸಾಲಗಳ ಬಗ್ಗೆ ತೀರ್ಮಾನ. | 16–18 |
| ವಿಷಯ–27 : | ಬ್ಯಾಂಕಿನ ಶಾಖೆಗಳಲ್ಲಿ ಜರುಗಿದ ಅವ್ಯವಹಾರ/ಮಿರೇಳತದ ಪ್ರಕರಣಗಳಲ್ಲಿ ಬಡ್ಡಿಯಲ್ಲಿ ರಿಯಾಯಿತಿಗೊಳಿಸಿ ಜಮಾ ಪಡೆದುಕೊಳ್ಳುವ ಬಗ್ಗೆ. | 19–20 |
| ವಿಷಯ–28 : | ಧಾರವಾಡ ಜಿಲ್ಲಾ ಮಹಿಳಾ ವಿವಿಧೋದ್ದೇಶಗಳ ಸಹಕಾರಿ ಸಂಘ ನಿ,. ಧಾರವಾಡ ಇವರ ಉಳಿತಾಯ ಖಾತೆಯಲ್ಲಿ ರೂ.1.00 ಲಕ್ಷ ಓಡಿ ಆದ ರಕಂನ್ನು ವಸೂಲಿ ಮಾಡಿದ್ದರ ಕುರಿತು. | 20 |
| ವಿಷಯ–29 : | ಮೀಸಲು ಅಥವಾ ಇತರೆ ನಿಧಿಗಳ ವಾಸ್ತವಿಕ ಬಳಕೆಯ ವಿಮರ್ಶೆ. | 20 |
| ವಿಷಯ–30 : | ಭಾರತ ಸರ್ಕಾರದ ಸಹಕಾರ ಸಚಿವಾಲಯದಿಂದ ಪ್ರತಿ ಜಿಲ್ಲೆಗೊಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಸ್ಥಾಪಿಸುವ ಕುರಿತಂತೆ ಬಂದ ಪತ್ರದ ಕುರಿತು. | 21 |
| ವಿಷಯ–31 : | ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು | 21 |


ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಸಹಿ/–

**(ಶ್ರೀಮತಿ ಡಾ: ಸುನಿತಾ ಸಿದ್ರಾಮ)**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಕೆ.ಸಿ.ಸಿ.ಬ್ಯಾಂಕ ಲಿ, ಧಾರವಾಡ.

ದಿ: 02/ 09/ 2026

**ವಿಶೇಷ ಸೂಚನೆಗಳು:**

1) ಬ್ಯಾಂಕಿನ ಮಹಾಸಭೆಯಲ್ಲಿ ಭಾಗವಹಿಸಲು ಸದಸ್ಯ ಸಂಘದಿಂದ ಆಯ್ಕೆ ಮಾಡಿದ ಅರ್ಹ ಒಬ್ಬ ಪ್ರತಿನಿಧಿಯ ಹೆಸರು ಮತ್ತು ಸದರಿ ಪ್ರತಿನಿಧಿಯ ಮಾಡಲ್ಪಟ್ಟ ನಿರ್ಣಯದ ನಕಲನ್ನು (ಇದರ ಲಗತ್ ಇಡಲಾದ ನಮೂನೆಯಲ್ಲಿ) ಸಂಘದ ಮೊಹರ ಸೀಲುದೊಂದಿಗೆ ಬ್ಯಾಂಕಿನ ಪ್ರಧಾನ ಕಚೇರಿಗೆ ತಲುಪುವಂತೆ ಹಾಗೂ ಪ್ರತಿನಿಧಿಯೊಂದಿಗೆ ಕಳುಹಿಸಿಕೊಡಬೇಕು ಮತ್ತು ಸಭೆ ನಡೆಯುವ ಸ್ಥಳದಲ್ಲಿ ಇಡಲಾಗುವ ಹಾಜರಿ ಪುಸ್ತಕದಲ್ಲಿ ಪ್ರತಿನಿಧಿ ಸಹಿ ಮಾಡಬೇಕು.
2) ಮಹಾಸಭೆಯಲ್ಲಿ ಬ್ಯಾಂಕಿಗೆ ಸಂಬಂಧಪಟ್ಟ ಚರ್ಚಿಸತಕ್ಕ ವಿಷಯ/ಪ್ರಶ್ನೆಗಳೇನಾದರೂ ಇದ್ದರೆ ಸದಸ್ಯರು ಅವುಗಳನ್ನು ಸ್ಪಷ್ಟವಾಗಿ ದಿ: 15/09/2026 ರೊಳಗಾಗಿ ಬ್ಯಾಂಕಿನ ಪ್ರಧಾನ ಕಚೇರಿಗೆ ತಲುಪುವಂತೆ ಲಿಖಿತ ಮೂಲಕ ಕಳುಹಿಸಿಕೊಡಬೇಕು. ಅವಧಿಯ ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.



Scanned with OKEN Scanner